**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**
**ದಂಡಾಧಿಕಾರಿಗಳ ನ್ಯಾಯಾಲಯ, ದಾಂಡೇಲಿ**
**ಕ್ರಿಮೀನಲ್ ಮೊಕದ್ದಮೆ ನಂ. 590/2024.**

**ಚಾಸಾ-01**

**ಪ್ರಾಸಾ- 01**

**ಸಾಕ್ಷಿಗೆ ದಿನಾಂಕ 11-09-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಃ ಪಾಂಡುರಂಗ ತಂಃ ಕಾಶಿನಾಥ ಪಾಟೀಲ |
| ವಯಸ್ಸು | ಃ 67 ವರ್ಷ |
| ಉದ್ಯೋಗ | ಃ ಖಾಸಗಿ ಕೆಲಸ |
| ವಾಸಸ್ಥಳ | ಃ ಜಗಲಪೇಟೆ |

**ಮುಖ್ಯವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1. ಚಾಸಾ-6 ನನ್ನ ಅಣ್ಣನ ಹೆಂಡತಿ. ದಿಃ 07-01-2024 ರಂದು ನನ್ನ ಅಣ್ಣನಾದ ಮೃತ ನೇತಾಜಿ ರವರು ನನ್ನ ಅತ್ತಿಗೆಯಾದ ಚಾಸಾ-6 ರವರ ಜೊತೆ ಮೋಟಾರ ಸೈಕಲ್ ನಂಃ ಕೆಎ-30/3028 ನೇದರಲ್ಲಿ ಜಮೀನಿನಿಂದ ಮನೆಗೆ ಬರುವಾಗ ಜಗಲಪೇಟೆಯ ಸಿಂಗರಗಾಂವ ಕ್ರಾಸ್ ಹತ್ತಿರ ಎದುರಿನಿಂದ ಒಬ್ಬ ವ್ಯಕ್ತಿ ತನ್ನ ದ್ವಿ ಚಕ್ರ ವಾಹನ ನಂಃ ಕೆಎ-34/ವಾಯ್-3795 ನೇದರ ಸವಾರನು ಸದರಿ ವಾಹನವನ್ನು ಅತೀ ವೇಗ ಹಾಗೂ ಅಜಾಗೂರುಕತೆಯಿಂದ ಚಲಾಯಿಸಿ, ನನ್ನ ಅಣ್ಣ ಚಲಾಯಿಸುತ್ತಿದ್ದ ದ್ವಿ ಚಕ್ರವಾಹನಕ್ಕೆ ಡಿಕ್ಕಿಪಡಿಸಿದ್ದರಿಂದ ಸದರಿ ಅಪಘಾತವಾಗಿರುತ್ತದೆ ಎಂದು ಆ ದಿನ ನಾನು ಸಂಜೆ 06-30 ಕ್ಕೆ ಮನೆಗೆ ಬಂದಾಗ, ಚಾಸಾ-6 ರವರು ನನಗೆ ಹೇಳಿರುತ್ತಾರೆ. ಸದರಿಯವರು ಮಂದುವರೆದು ನನ್ನ ಅಣ್ಣನಾದ ನೇತಾಜಿ ರವರಿಗೆ ಗಂಭೀರ ಗಾಯಗಳಾದ ಕಾರಣ, ಅವರನ್ನು ರಾಮನಗರ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದ ವಿಷಯವನ್ನು ತಿಳಿಸಿದವರು. ಚಾಸಾ-6 ರವರಿಗೆ ಸಾಕಷ್ಟು ಕಡೆ ತರಚಿದ ಗಾಯಗಳಾಗಿದ್ದವು.
2. ನಂತರ ನಾನು ರಾಮನಗರ ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿದಾಗ, ನನ್ನ ಅಣ್ಣನಿಗೆ ಹೆಚ್ಚಿನ ಚಿಕಿತ್ಸೆಗಾಗಿ ಖಾನಾಪುರದ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಅವರಿಗೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುತ್ತಾರೆ. ಅದೇ ದಿನ ನಾನು ಪೊಲೀಸ್ ಠಾಣೆಗೆ ತೆರಳಿ

ರಾತ್ರಿ 10-00 ಗಂಟೆಗೆ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

3. ನಂತರ ಮರು ದಿನ ಪೊಲೀಸರು ನನ್ನ ಮತ್ತು ಚಾಸಾ-2 ಮತ್ತು 3 ರವರ ಸಮಕ್ಷಮ ಘಟನಾ ಸ್ಥಳದಲ್ಲಿ ಬೆಳಿಗ್ಗೆ 09-00 ರಿಂದ 10-00 ಗಂಟೆಯ ವರೆಗೆ ಸ್ಥಳ ಪಂಚನಾಮೆಯನ್ನು ಜರುಗಿಸಿ, ಕಚ್ಚಾ ನಕಾಶೆಯನ್ನು ತಯಾರಿಸಿ, ನನ್ನ ಸಹಿ ಪಡೆದಿರುತ್ತಾರೆ ಹಾಗೂ ಪೋಟೋಗಳನ್ನು ತೆಗೆದಿರುತ್ತಾರೆ.

4. ಸಾಕ್ಷಿಯು ಘಟನಾ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

5. ಸಾಕ್ಷಿಯು ಘಟನಾ ಸ್ಥಳದ ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

6. ಸಾಕ್ಷಿಯು ಎರಡು ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗ ನಿಪಿ-4 ಮತ್ತು 5 ಎಂದು ಹಾಗೂ ಅವುಗಳನ್ನು ಹೊಂದಿದ ಸಿಡಿಯನ್ನು ನಿಪಿ-6 ಎಂದು ಗುರುತಿಸಲಾಯಿತು.

**(ಮಾನ್ಯ ಸ.ಸ.ಅ ರವರು ಸಾಕ್ಷಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಅನುಮತಿಸಲಾಯಿತು)**

**ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ**

7. ಅಪಘಾತಪಡಿಸಿದ ದ್ವಿ ಚಕ್ರ ವಾಹನದ ನಂಃ ಕೆಎ-24/ವಾಯ್-3795 ಆಗಿರುತ್ತದೆ ಎಂದರೆ ಸರಿ. ಸದರಿ ದ್ವಿ ಚಕ್ರ ವಾಹನದ ಚಾಲಕನೇ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ಆಗಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಆರೋಪಿಯು ದ್ವಿ ಚಕ್ರ ವಾಹನವನ್ನು ಚಲಾಯಿಸುತ್ತಿರುವುದನ್ನು ನನ್ನ ಅಣ್ಣನ ಮಗನಾದ ಚಾಸಾ-11 ರವರು ನನಗೆ ಹೇಳಿರುತ್ತಾರೆ.

8. ಪೊಲೀಸರಿಗೆ ಸ್ಥಳ ಪಂಚನಾಮೆಯ ಸಮಯದಲ್ಲಿ ಘಟನಾ ಸ್ಥಳವನ್ನು ಚಾಸಾ-7 ರವರು ತೋರಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಸ್.ಪಿ.ವಕೀಲರಿಂದ**

9. ನನಗೆ ಈಗ 67 ವರ್ಷಗಳಾಗಿರುತ್ತವೆ. ನನ್ನ ಅಣ್ಣ ಮೃತನಾದಾಗ ಅವರಿಗೆ ಅಂದಾಜು 80

ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ಅವರಿಗೆ 72 ರಿಂದ 73 ವರ್ಷ ವಯಸ್ಸಾಗಿತ್ತು. ನಾನು ಮತ್ತು ಮೃತ ನೇತಾಜಿ ರವರು ಜಗಲಪೇಟೆಯ ನಿವಾಸಿಗಳು ಎಂದರೆ ಸರಿ. ರಾಮನಗರ - ಜೋಯಿಡಾ ರಸ್ತೆ ರಾಜ್ಯ ಹೆದ್ದಾರಿ ಎಂದರೆ ನನಗೆ ಗೊತ್ತಿಲ್ಲ. ಅಪಘಾತವಾದ ಸ್ಥಳದಲ್ಲಿ ಒಂದು ತಿರುವು ಇದೆ ಎಂದರೆ ಸರಿ. ರಾಮನಗರದಿಂದ ಜೋಯಿಡಾಕ್ಕೆ ಹೋಗುವಾಗ ಅಪಘಾತವಾದ ಸ್ಥಳದ ಅಂತರದಲ್ಲಿ ರಸ್ತೆ ವಿಭಾಗವಾಗಿ ಒಂದು ರಸ್ತೆ ಸಿಂಗರಗಾಂವ ಊರಿಗೆ ಮತ್ತು ಇನ್ನೊಂದು ರಸ್ತೆ ಜೋಯಿಡಾಕ್ಕೆಹೋಗುತ್ತದೆ ಎಂದರೆ ಸರಿ.

10. ಆ ದಿನ ನನ್ನ ಅಣ್ಣ ದುರ್ಗಿ ಗ್ರಾಮದಿಂದ ಜಗಲಪೇಟೆಗೆ ಬರುತ್ತಿದ್ದರು. ಅಪಘಾತವಾಗಿದೆ ಎನ್ನಲಾದ ದಿನವು ನನ್ನ ಅಣ್ಣ ಸಿಂಗರಗಾಂವ ರಸ್ತೆಯಿಂದ ಬಂದು, ರಾಮನಗರ ರಸ್ತೆಗೆ ತಿರುವು ತೆಗೆದುಕೊಂಡು ಎಡಬದಿಗೆ ತಿರುವು ತೆಗೆದುಕೊಂಡು ಜಗಲಪೇಟಗೆ ಹೋಗಬೇಕು ಎಂದರೆ ಸರಿ. ನನ್ನ ಅಣ್ಣ ಕೃಷಿಕ. ನನ್ನ ಅಣ್ಣನು ಕನ್ನಡಕವನ್ನು ಹಾಕುತ್ತಿರಲಿಲ್ಲ. ಅವರ ವಯೋ ಸಹಜತೆಯಿಂದ ಅವರಿಗೆ ಸರಿಯಾಗಿ ಕಣ್ಣುಗಳು ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ಅಣ್ಣ ತನ್ನ ವಯೋ ಸಹಜತೆಯಿಂದ ಸರಿಯಾಗಿ ಕಣ್ಣುಗಳು ಕಾಣದ ಕಾರಣ, ಎದುರಿಗೆ ಬಂದ ವಾಹನವನ್ನು ಗಮನಿಸದೆ ತಾವೆ ವೇಗವಾಗಿ ಬಂದು, ಅಜಾಗೂರುಕತೆಯಿಂದ ಚಲಾಯಿಸಿ, ಆರೋಪಿ ಚಲಾಯಿಸುತ್ತಿದ್ದ ದ್ವಿ ಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿರುತ್ತಾರೆ ಎಂದರೆ ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದು ನುಡಿಯುತ್ತಾರೆ. ಆದ್ದರಿಂದ ಅಪಘಾತ ಹೇಗೆ ಸಂಭವಿಸಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ಅತ್ತಿಗೆ ಹೇಳಿದ ಪ್ರಕಾರ ನಾನು ನುಡಿಯುತ್ತಿದ್ದೇನೆ ಎಂದು ನುಡಿಯುತ್ತಾರೆ.

11. ನನ್ನ ಅಣ್ಣ ನೇತಾಜಿ ರವರಿಗೆ ದ್ವಿ ಚಕ್ರ ವಾಹನದ ಚಾಲನಾ ಪರವಾನಗಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಣ್ಣ ನೇತಾಜಿ ರವರಿಗೆ ದ್ವಿ ಚಕ್ರ ವಾಹನವನ್ನು ಚಲಾಯಿಸಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ ನೇತಾಜಿ ಚಲಾಯಿಸುತ್ತಿದ್ದ ದ್ವಿ ಚಕ್ರ ವಾಹನಕ್ಕೆ ಯಾವುದೇ ವಿಮೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಈ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣನಿಗೆ ಪರಿಹಾರ ಕೊಡಿಸುವ ಉದ್ದೇಶದಿಂದ ಆರೋಪಿಯ ವಿರುದ್ದ ಸುಳ್ಳು ದೂರನ್ನು ನೀಡಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

12. ಪಂಚನಾಮೆಯನ್ನು ದಿಃ 08-01-2024 ರಂದು ಮಾಡಿರುತ್ತಾರೆ. ನನ್ನ ಸಮಕ್ಷಮ ಯಾವುದೇ

ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಪಂಚನಾಮೆಯನ್ನು ಮಾಡಲು ಸ್ಥಳಕ್ಕೆ ಹೋದಾಗ, ಅಲ್ಲಿ ಯಾವುದೇ ವಾಹನಗಳು ಇರಲಿಲ್ಲ. ನನ್ನ ಸಮಕ್ಷಮ ಯಾವುದೇ ಕಚ್ಚಾ ನಕಾಶೆ ಮತ್ತು ಫೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತವು ನನ್ನ ಅಣ್ಣನ ತಪ್ಪಿನಿಂದಲೇ ಸಂಭವಿಸಿದ್ದು, ಆರೋಪಿ ದ್ವಿ ಚಕ್ರವಾಹನವನ್ನು ಯಾವುದೇ ಅಜಾಗೂರುಕತೆಯಿಂದ ಅಥವಾ ವೇಗವಾಗಿ ಚಲಾಯಿಸುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ ಇದೆ.**

**ಸಹಿ ಇದೆ/-**

**(ತೇಜಸ್ವಿನಿ ಸೊಗಲದ)**
**ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು,ದಾಂಡೇಲಿ.**